24



# ಒಕ್ಕಲಿಗಂಗೆ ಒಲಿದಾಳ ಭೂಮಿತಾಯಿ.....



ತಂದಾನೊ ತಾನೊ ತಾನಾನಿ ತಾನೋ
ತಂದಾನೆ ತಾನೋ ತಾನೆ ತಂದನಾನೋ।।
ದೂರದ ಬೆಟ್ಟದ ನೀರನು ಕಟ್ಟಿ
ಕೆರೆಯನು ತುಂಬ್ಯಾರೆ।
ನೀರನು ಹಾಯ್ಸಿ ಉಲುಸಾಗಿ ಪೈರು
ಪಚ್ಚೆಯ ಬೆಳೆಸ್ಯಾರೆ।।
ಸುರಿದಾರೆ ಕಾಲಕೆ ಮುಂಗಾರುಮಳೆಯು
ಹರಿದಾರೆ ಹರುಷದಿ ಹೊನ್ನಿನ ಹೊಳೆಯು।
ಬೆಳೆದಾವು ಬೆಡಗಿನ ಬೆಳ್ಳಿಯ ಬೆಳೆಯು
ತರುವುದು ಜನಕ್ಕೆಲ್ಲ ರನ್ನದ ಹೊಳೆಯು।।
ತಂದನೊ ತಾನೊ ತಾನಾನಿ ತಾನೋ
ತಂದಾನೆ ತಾನೋ ತಾನೆ ತಂದನಾನೋ।।



❒ ಮೇಲಿನ ಹಾಡನ್ನು ಹಾಡಿದಿರಲ್ಲವೇ? ಪದ್ಯದ ಆಶಯದ ಕುರಿತಾಗಿ ತರಗತಿಯಲ್ಲಿ ಚರ್ಚಿಸಿರಿ.

# ಸರ್ವಜ್ಞನ ತ್ರಿಪದಿಗಳು

ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು
ಮೇಟಿಯಿಂ ರಾಟಿ ನಡೆದುದಲ್ಲದೆ । ದೇಶ
ದಾಟವೆ ಕೆಡುಗು ಸರ್ವಜ್ಞ॥

ಉತ್ತೊಮ್ಮೆ ಹರಗದಲೆ ಬಿತ್ತೊಮ್ಮೆ ನೋಡದಲೆ
ಹೊತ್ತೇರಿ ಹೊಲಕೆ ಹೋದರೆ । ಅವತನ್ನ
ನೆತ್ತರವ ಸುಡುವ ಸರ್ವಜ್ಞ॥

ಬಿತ್ತದ ಹೊಲ ಹೊಲ್ಲ ಮೆತ್ತದ ಮನೆ ಹೊಲ್ಲ
ಎತ್ತ ಬಂದತ್ತ ತಿರುಗುವ। ಮಗ ಹೊಲ್ಲ
ಬತ್ತಲಿರ ಹೊಲ್ಲ ಸರ್ವಜ್ಞ॥

ದಂಡು ಇಲ್ಲದ ಅರಸು ಕೊಂಡವಿಲ್ಲದ ಹೋಮ
ಬಂಡಿಯಿಲ್ಲದವನ ಬೇಸಾಯ । ತಲೆಹೋದ
ಮುಂಡದಂತಿಕ್ಕು ಸರ್ವಜ್ಞ॥

- ❒ ಮೇಲಿನ ತ್ರಿಪದಿಗಳನ್ನು ರಾಗವಾಗಿ ಹಾಡಿರಿ.
- ❒ ಈ ಕೆಳಗಿನ ಆಶಯಗಳಿರುವ ಸಾಲುಗಳನ್ನು ತ್ರಿಪದಿಗಳಿಂದ ಆಯ್ದು ಬರೆಯಿರಿ.
    - ಉಳುಮೆ ಮಾಡಿ ಬಿತ್ತಿದ ಮೇಲೆ ಬಂದೊಮ್ಮೆ ನೋಡದೆ.
    - ಕೋಟಿ ವಿದ್ಯೆಗಳಲ್ಲಿ ಬೇಸಾಯದ ವಿದ್ಯೆಯೇ ಮೇಲು.
    - ಎತ್ತಿನ ಗಾಡಿಯಿಲ್ಲದವನ ಬೇಸಾಯ, ತಲೆಯಿಲ್ಲದ ದೇಹದಂತೆ.
- ❒ 'ಬಂಡಿಯಿಲ್ಲದವನ ಬೇಸಾಯ, ತಲೆಹೋದ ಮುಂಡದಂತಿಕ್ಕು' ಬಯಲು ಸೀಮೆಯಲ್ಲಿ ಎತ್ತಿನ ಬಂಡಿಯ ಮಹತ್ವದ ಕುರಿತು ಕವಿ ಹೇಳಿದ ಮಾತಿನ ಬಗ್ಗೆ ನಿಮ್ಮ ಅನಿಸಿಕೆಗಳನ್ನು ಟಿಪ್ಪಣಿ ರೂಪದಲ್ಲಿ ಬರೆದು ತರಗತಿಯಲ್ಲಿ ಓದಿ ಹೇಳಿರಿ.



## ಬೇಸಾಯಗಾರ ತಿಮ್ಮ

ತಿಮ್ಮ ಬುದ್ಧಿವಂತನಾದ ಒಬ್ಬ ರೈತ. ಅವನು ಶ್ರಮಜೀವಿಯಾಗಿದ್ದನು. ಓದುಬರಹವನ್ನು ಚೆನ್ನಾಗಿ ಬಲ್ಲವನಾಗಿದ್ದನು. 'ಕೋಟಿ ವಿದ್ಯೆಗಿಂತಲೂ ಮೇಟಿ ವಿದ್ಯೆಯೇ ಮೇಲು!' ಎಂಬಂತೆ ಬೇಸಾಯವನ್ನೇ ನಚ್ಚಿಕೊಂಡಿದ್ದನು. ಅವನು ಬಹಳ ಪ್ರಾಮಾಣಿಕನೂ ಕಾಯಕದ ಮಹತ್ವವನ್ನು ತಿಳಿದವನೂ ಆಗಿದ್ದನು. 'ದುಡಿಮೆಯೇ ದೇವರೆಂಬ' ನಿಷ್ಠೆ ಅವನಲ್ಲಿತ್ತು. ಸತತವಾದ ಪರಿಶ್ರಮದಿಂದ ಜೀವನದಲ್ಲಿ ಸ್ವಾವಲಂಬನೆಯನ್ನು ಪಡೆದ ಅವನು 'ಮನಸ್ಸಿದ್ದರೆ ಮಾರ್ಗ' ಎಂಬುದನ್ನು ಸಾಧಿಸಿ ತೋರಿಸಿದ್ದನು.

❐ ಮೇಲಿನ ಗದ್ಯಭಾಗದಲ್ಲಿ ಬಂದಿರುವ ನಾಣ್ಣುಡಿಗಳನ್ನು ಗಮನಿಸಿರಿ. ನಾಣ್ಣುಡಿಗಳನ್ನು ಬಳಸಿಕೊಂಡು ಈ ರೀತಿ ನೀವೂ ಬರೆಯಬಹುದಲ್ಲವೇ? ಕೆಳಗೆ ಕೊಡಲಾದ ನಾಣ್ಣುಡಿಗಳನ್ನು ಉಪಯೋಗಿಸಿಕೊಂಡು ಸನ್ನಿವೇಶವೊಂದನ್ನು ಬರೆದು ನೋಡಿ.

- ಶಕ್ತಿಗಿಂತ ಯುಕ್ತಿಮೇಲು
- ಒಗ್ಗಟ್ಟಿನಲ್ಲಿ ಬಲವಿದೆ
- ಅತಿಆಸೆ ಗತಿಗೇಡು

❐ ಬೇಸಾಯಕ್ಕೆ ಸಂಬಂಧಿಸಿದ ಗಾದೆಗಳನ್ನು ಸಂಗ್ರಹಿಸಿರಿ.

## ಜನಪದ ಸಾಹಿತ್ಯದಲ್ಲಿ ಕೃಷಿ

ವೈವಿಧ್ಯಮಯವಾಗಿ ದೊರೆಯುವ ಜನಪದ ಸಾಹಿತ್ಯದಲ್ಲಿ ಜನಪದರ ಬದುಕಿನ ಬಹುಮುಖ್ಯ ಭಾಗವಾದ ಕೃಷಿಗೆ ವಿಶಿಷ್ಟವಾದ ಸ್ಥಾನವಿದೆ. ಅದು ಜಾನಪದದ ಜೀವಾಳ, ಬದುಕಿನ ಮೂಲ. ಆದ್ದರಿಂದಲೇ ತಮ್ಮ ದಿನನಿತ್ಯದ ಕಾಯಕದಲ್ಲಿ ನಿರತರಾಗಿರುವ ರೈತರು ತಮ್ಮ ಕಾಯಕದ ಕುರಿತು ಎದೆತುಂಬಿ ಹಾಡಿದ್ದಾರೆ.

ಮಳೆಬಿದ್ದು ಹದಗೊಂಡ ಭೂಮಿಯಲ್ಲಿ ಉತ್ತಿ–ಬಿತ್ತಿ ರಾಶಿ ಮಾಡುವವರೆಗಿನ ಪ್ರತಿ ಹಂತದಲ್ಲಿಯೂ ರೈತರ ಹೃದಯ ತುಂಬಿಬರುತ್ತದೆ. ಕ್ಷಣಕ್ಷಣದ ಘಟನೆಗಳು ಅವರ ಜೀವನದ ಬಹುಮುಖ್ಯ ಸಂಗತಿಗಳಾಗುತ್ತವೆ. ಇಂದಿನ ಯಾಂತ್ರಿಕ ಯುಗದಲ್ಲಿ ಹಿಂದಿನ ಸಂಪ್ರದಾಯಗಳಿಗೆ ಈಗೀಗ ವಿರಾಮ ದೊರೆಯುತ್ತಿದೆಯಾದರೂ ಜನಪದ ಕವಿಗಳು ಚಿತ್ರಿಸಿದ ಕಾವ್ಯಗಳಲ್ಲಿ ಅದಿನ್ನೂ ಹಚ್ಚಹಸಿರಾಗಿಯೇ ಉಳಿದಿದೆ. ಅಂತಹ ನೂರಾರು ಚಿತ್ರಗಳಲ್ಲಿ ಕೆಲವನ್ನು ಇಲ್ಲಿ ನೋಡೋಣ.

ಕೃಷಿಗೆ ಮಳೆ ಮೂಲ ಆಧಾರ. ಮಳೆ ಬಂದರೆ ಸಾಕು, ಇಡೀ ಜೀವ ಜಗತ್ತು ಎಚ್ಚರಗೊಳ್ಳುತ್ತದೆ.

ಎದ್ದಾನು ಮಳೆರಾಜ ಬಿದ್ದಾನು ಭೂಮಿಮ್ಯಾಗ

ಎದ್ದಾನು ಒಕ್ಕಲಿಗ ಬೆಳಗಾನ । ಬಿದ್ದಾವ

ಕೂರಿಗೆತಾಳ ಬಡಿಗೇರ ಅರಮನಿಗೆ

ಮಳೆ ಬರುವವರೆಗೆ ರೈತನಿಗೂ ಆತನ ಸಲಕರಣೆಗಳಿಗೂ ವಿಶ್ರಾಂತಿ. ಆದರೆ ಒಂದು ಸಲ ಮಳೆ ಬಿದ್ದರೂ ಸಾಕು ಆತನ ಇಡೀ ಜಗತ್ತೇ ಎಚ್ಚರಗೊಳ್ಳುತ್ತದೆ. ಎಲ್ಲಿಯೋ ಬಿದ್ದ ಕೂರಿಗೆತಾಳಗಳನ್ನು ಎತ್ತಿ ತಿದ್ದಲು ಬಡಿಗನ ಮನೆಗೆ ಬರುತ್ತಾನೆ. ಬಿಳಿಅಂಗಿ, ಕಾಯಿ ಉಡಿದಾರದ ಒಕ್ಕಲಿಗ ಮಂಡಿಯೂರಿ ಬಡಿಗನ ಮುಂದೆ ಶರಣೆಂದು ಕುಳಿತಿದ್ದಾನೆ. ಹೀಗೆ ಬಡಿಗನಿಂದ ಕೂರಿಗೆಯನ್ನು ಎಳೆಸುದ್ದ ಮಾಡಿಕೊಂಡು, ಮೊದಲ ಸಲ ರೈತ ಹೊಲಕ್ಕೆ ಹೊರಡುವ ಅಂದ ಅದು ಬೇರೆತರದ್ದು.

ಹುಗ್ಗಿ ಹೋಳಿಗಿ ಉಂಡ ಮಗ್ಗಿ ರುಂಬಾಲ ಸುತ್ತಿ ।

ಬಗ್ಗಿ ಕೂರಿಗಿ ಬಿಗಿದಾನ । ಒಕ್ಕಲಿಗ್ಯಾನ

ಬುದ್ಧಿಗಿ ಒಲೀತಾಳ ಭೂಮಿತಾಯಿ


ಹೋಳಿಗೆ ಉಂಡು ಶೃಂಗಾರವಾಗಿ ಹೊರಟ ರೈತನ ಬುದ್ಧಿಗೆ ಭೂಮಿತಾಯಿ ಒಲಿಯುತ್ತಿದ್ದಾಳೆ. ಆತನ ಸಡಗರ – ಸಂಭ್ರಮ ವರ್ಣನೆಗೆ ಅತೀತವಾದದ್ದು. ಎತ್ತು, ಕೂರಿಗೆ, ಬೀಜದ ಹೆಡಿಗೆ, ಮಾದಿಗನ ಮಿಣಿ, ಆತನ ಹೆಗಲ ಮೇಲಿನ ನೊಗ ಎಲ್ಲವುಗಳ ಮೇಲೂ ಆತನ ಪ್ರೀತಿ ಉಕ್ಕಿಹರಿಯುತ್ತಿದೆ. ಹಾಗೆ ಕಾಳನ್ನು ಬಿತ್ತುವಾಗ

ಬಡವನ ಕೂರಿಗಿ ನಡಹೊಲಕ ಬಂದರೆ ।

ಹೆಡಗೀಲಿ ಕಾಯಿ ಒಡಿಸ್ಯಾನ । ಬಡವನ

ಸೆಡಗರ ನೋಡುದಕ ಶಿವ ಬಂದ

ಬಿತ್ತುವುದೆಂದರೆ ಸುಮ್ಮನೆ ಉದ್ದಕ್ಕೆ ಬಿತ್ತುತ್ತ ಹೋಗುವುದಲ್ಲ. ನಡುಹೊಲಕ್ಕೆ ಬಂದಾಗ ಹೆಡಿಗೆ ತುಂಬ ತೆಂಗಿನಕಾಯಿಗಳನ್ನು ಒಡೆಯುತ್ತಾನೆ. ಆತನ ಸಡಗರವನ್ನು ನೋಡಲು ಆಕಾಶದಿಂದ ಶಿವನೇ ಬರುತ್ತಾನಂತೆ!



ಹೀಗೆ ಬಿತ್ತಿ ಬಂದು ಏಳು ದಿನಗಳ ಬಳಿಕ ಹೊಲಕ್ಕೆ ಹೋಗಿ ನೋಡುತ್ತಾನೆ.

ಬಿತ್ತಿದ ಏಳುದಿನಕ ಹೊಲಕ ಹೋಗಿ ನೋಡ್ಯಾನ
ಸಾಲು ಸಾಲೆಲ್ಲ ಸಸಿ ನಾಟಿ । ಒಕ್ಕಲಿಗ್ಯಾ
ಸಂತೋಸಾಗ್ಯಾನಾ ಮನದಾಗ


ಸಾಲು–ಸಾಲುಗಳೆಲ್ಲ ಸಸಿ ನಾಟಿದ್ದನ್ನು ನೋಡಿದ ರೈತನ ಮನಸ್ಸು ಸಂತೋಷಗೊಳ್ಳುತ್ತದೆ. ಒಂದು ತಿಂಗಳ ನಂತರ ಎಡಿ ಹೊಡೆಯಬೇಕೆಂದುಕೊಂಡರೆ,

ಸಸಿ ನಾಟಿ ತಿಂಗಳಿಗೆ ಹೊಲಕ ಹೋಗಿ ನೋಡ್ಯಾನ
ಹೊಡಿಯಬೇಕೆಂದ ಹೀಲೆಡಿಯ। ಒಕ್ಕಲಿಗ್ಯಾ
ಹೊರಪ ಕೊಡವಲ್ಲ ಮಳಿರಾಜ

ನೆಲವನ್ನು ಹರಗಲು ಮಳೆರಾಜ ಹೊರಪ್ಪನ್ನು ಅಂದರೆ ಬಿಡುವನ್ನೇ ಕೊಡಲೊಲ್ಲ. ಅಂತದ್ದರಲ್ಲಿಯೇ ಆಗೀಗ ಹೊರಪು ಕಂಡು ಪಿಳಗುಂಟಿಯಿಂದ (ನೆಲಸಮಗೊಳಿಸುವ ಸಣ್ಣ ಯಂತ್ರ) ಎಡಿ ಹೊಡೆದೇ ಬಿಡುತ್ತಾನೆ ರೈತ. ಮತ್ತೆ ಒಂದು ತಿಂಗಳಿಗೆ ಹೊಲಕ್ಕೆ ಹೋಗಿ ನೋಡಿದರೆ ಹೊಡಿತೆನಿಯನ್ನೇ ಹಾಕಿದೆ ಜೋಳದ ಪೈರು! ಹೊಲದಲ್ಲಿ ತೆನೆ ಕಾಳು ತುಂಬುತ್ತಿರುವಂತೆ ಸಮಸ್ಯೆಗಳು ಬರುವುದು ಸಹಜ ತಾನೆ? ಹಕ್ಕಿಗಳ ಕಾಟವನ್ನು ತಪ್ಪಿಸಲು ಹೊಲದಲ್ಲಿ ಅಟ್ಟವನ್ನು ಹಾಕಿ ಕಾಯಬೇಕು. ಹಕ್ಕಿಗಳನ್ನು ಹೊಡೆಯಬೇಕು. ಅಷ್ಟೆಲ್ಲ ಮಾಡಿ ಹಕ್ಕಿಗಳಿಂದ ಉಳಿಸಿದ ಬೆಳೆಯನ್ನು ಒಂದುಗೂಡಿಸಬೇಕು. ಹಾಗೆ ಕುಯ್ದು ಗೂಡು ಮಾಡಿದ ಮೇಲೆ,

ಗೂಡಿಗೆ ಚರಗ ಮಾಡಬೇಕೊ ಮುತ್ತೈದೇರ । ಕರಸಬೇಕೊ
ಉಡಿತುಂಬಿ ಗೂಡ ಮುರಿಬೇಕ। ಒಕ್ಕಲಿಗ್ಯಾ
ಮೂರ್ತ ಕೇಳಿ ಕಣ ಕಡೀಬೇಕೊ

ಗೂಡಿಗೆ ಪೂಜೆ ಮಾಡಿ. ನೈವೇದ್ಯ ತೋರಿಸಬೇಕು. ಆ ಮೊದಲು ಎಳ್ಳಮವಾಸ್ಯೆ ದಿನ ಚರಗ ಚೆಲ್ಲಿ ನಂತರ





ಗೂಡನ್ನು ಮುರಿಯಬೇಕಾಗುತ್ತದೆ. ಗೂಡನ್ನು ಮುರಿಯುವ ಮುನ್ನ ಮುತ್ತೈದೆಯರನ್ನು ಕರೆದು ಉಡಿತುಂಬಬೇಕು. ಹೀಗೆ ಮುರಿದ ಗೂಡನ್ನು ಕಣದಲ್ಲಿ ಕೂಡಿಹಾಕಲು ಮುಹೂರ್ತ ಕೇಳಿ ಕಣವನ್ನು ಸಿದ್ಧಪಡಿಸುತ್ತಾರೆ. ಕಣ ಸಿದ್ಧಪಡಿಸಲು ಜನ ಬೇಕು.

ಮುಹೂರ್ತದ ದಿನ ಸ್ನೇಹಿತರೆಲ್ಲ ಬಂದು ಕಣ ಕಡಿದು, ನೀರನ್ನು ಹೊಡೆದು ನಡುವೆ ಮೇಟಿಯನ್ನು ನಿಲ್ಲಿಸಿದ್ದಾರೆ. ಇಡೀ ಊರ ಮುತ್ತೈದೇರೆಲ್ಲ ಬಂದು ಗೂಡಿನ ತೆನೆಗಳನ್ನೆಲ್ಲ ಮುರಿದು ಕಣದಲ್ಲಿ ಹಾಕಿದ್ದಾರೆ. ಈಗ ಕಣ ಮಾಡಬೇಕು. ಹಂತಿಯನ್ನು ಹೊಡೆಯಬೇಕು. ತನ್ನ ಎರಡೊ, ನಾಲ್ಕೋ ಎತ್ತುಗಳು ಅದಕ್ಕೆ ಸಾಲವು. ಆಗ ಮತ್ತೆ.

ಹತ್ತು ಮಂದಿಯ ಕೂಡಿ ಎತ್ತಾದರೂ ಕೂಡಿಸಿ
ಮತ್ತಾದರು ಕಾಯಿ ಒಡೀಬೇಕೊ। ಕಣದಾಗ
ಹಂತೀಯ ಹೊಗಿಸಿ ಹೋssವ ಅನಬೇಕೊ

ಹತ್ತಿರದ ಜನರೆಲ್ಲ ಸೇರಿ ತಂತಮ್ಮ ಎತ್ತುಗಳನ್ನು ತಂದು, ಮತ್ತೆ ಕಣಕ್ಕೆ ತೆಂಗಿನಕಾಯಿಯನ್ನು ಒಡೆದು ಎತ್ತುಗಳನ್ನು ಹಂತಿಯಲ್ಲಿ ಹೊಗಿಸುತ್ತಾರೆ. ಸುತ್ತು ತಿರುಗಿಸಲು ಜೊತೆಯಾಗಿ 'ಹೋssವ' ಎಂದು ಕೂಗುತ್ತ – ಹಾಡು ಹಾಡುತ್ತಿರುವುದನ್ನು ಅನುಭವಿಸಿಯೇ ಸವಿಯಬೇಕು.

❐ ಕೂರಿಗೆ, ತಾಳ, ಹೆಡಿಗೆ ಮೊದಲಾದವುಗಳು ಬೇಸಾಯಕ್ಕೆ ಸಂಬಂಧಿಸಿದ ಪದಗಳಾಗಿವೆ. ಈ ರೀತಿಯ ಪದಗಳನ್ನು ಪಾಠಭಾಗದಿಂದ ಆಯ್ದು ಬರೆಯಿರಿ. ಪದಕೋಶದ ಸಹಾಯದಿಂದ ಅವುಗಳಿಗೆ ವಿವರಣೆ ಕೊಡಿರಿ.

❐ ಮೊದಲ ಮಳೆ ಬಿದ್ದಾಗ ಬೇಸಾಯಕ್ಕೆ ಮುಂದಾಗುವ ರೈತನ ಸಂತೋಷ, ಸಡಗರ ಹೇಳತೀರದು. ನೀವು ಓದಿದ ತ್ರಿಪದಿಗಳಲ್ಲಿ ಆ ಕುರಿತು ವರ್ಣಿಸಲಾಗಿದೆ. ಅವುಗಳನ್ನು ಸಂಗ್ರಹಿಸಿ ಟಿಪ್ಪಣಿ ಬರೆಯಿರಿ.

❐ ಬೇಸಾಯದ ಕುರಿತಾದ ನಿಮ್ಮ ಹಿರಿಯರ ಅನುಭವಗಳನ್ನು ಕೇಳಿ ತಿಳಿಯಿರಿ. ಆ ಅನುಭವಗಳನ್ನು ಟಿಪ್ಪಣಿ ರೂಪದಲ್ಲಿ ಬರೆದು ತರಗತಿಯಲ್ಲಿ ಮಂಡಿಸಿರಿ.

❐ ಬೇಸಾಯದ ಕುರಿತಾಗಿರುವ ಜನಪದ ಹಾಡುಗಳನ್ನು ಸಂಗ್ರಹಿಸಿ ಒಂದೆರಡನ್ನು ತರಗತಿಯಲ್ಲಿ ಹಾಡಿರಿ.

❐ ಕೃಷಿಗೆ ಸಂಬಂಧಿಸಿದ ಹಲವಾರು ಪದಗಳನ್ನು ಗಮನಿಸಿದಿರಲ್ಲವೇ? ನಮ್ಮ ಪ್ರದೇಶದ ಬೇಸಾಯ, ಕೃಷಿವಲಯಗಳಿಂದ ಮರೆಯಾಗುತ್ತಿರುವ ಪದಗಳ ಪಟ್ಟಿ ತಯಾರಿಸಿರಿ. ಕಾರಣಗಳನ್ನು ಬರೆಯಿರಿ.



# ಗ್ರಾಮೀಣ ಗೀತೆ

ರಾಗಿ ಜೋಳ ತೂಗಿ ತೊನೆದು
ಅಕ್ಕಪಕ್ಕ ಹೊಲಗಳಲ್ಲಿ ಹರಡೈತೋ ಹಳ್ಳಿ ಸೊಗಡು!

ನಕ್ಕೈತಿಲ್ಲಿ ಹಸಿರು ಹೊಂಗೆ ಸಾಲು
ಕುಣಿದೈತಿಲ್ಲಿ ಕಾಡು ಸೋಗೆ ನವಿಲು
ನೋಡೋಕೆರಡೂ ಕಣ್ಣು ಸಾಲುತಾ ಇಲ್ವೋ!

ಬಾಗೈತಿಲ್ಲಿ ಚಿಗುರು ನಾಗವಲ್ಲಿ
ಬರದೈತಿಲ್ಲಿ ಹೂವಿನ ರಂಗವಲ್ಲಿ –
ತಾಳೆ ಬಾಳೆ ಬಳುಕುತ ಕುಣಿದಾವಿಲ್ಲಿ
ಈಳೆ ನಿಂಬೆ ಹೊಳೆಯುತ ಸೆಳೆದಾವಿಲ್ಲಿ .....

ಮೂಕ ಮಾತಾಡ್ತಾನೋ
ಬೆಡಗೇ ಹರಿದಾಡ್ತಾವೋ
ನೊಂದು ಬೆಂದ ಮನಕೆ ಹಳ್ಳಿಗಾಡು
ಹುರುಪು ತಂದೈತೋ!

ದೂರದಲ್ಲಿ ತೆಂಗಿನ ತೋಟಗಳು
ಜೀಕಿ ಜೀಕಿ ಜಿಗಿಯುವ ಕೋತಿಗಳು –
ಬಿಕ್ಕೆ ಹಣ್ಣು ಮರ ಗಿಡ ತೂಗಿರಲು
ಪಂಚರಂಗಿ ಗಿಳಿಗಳು ಹಾರಿರಲು –

ಹಳ್ಳಿಪದ ಹರಿದಾವೋ
ಸೊಬಗಸಿರಿ ಸಾರ್‍ಯಾವೋ!
ಬದುಕು ಬವಣೆ ಮರೆಸೋ
ಹಳ್ಳಿಗಾಡು ಹಿಗ್ಗುತಂದೈತೋ!

ಡಾ। ದೊಡ್ಡರಂಗೇಗೌಡ



- ❐ ಪದ್ಯವನ್ನು ರಾಗವಾಗಿ ಹಾಡಿರಿ.
- ❐ ಪದ್ಯದಲ್ಲಿ ನಿಮಗಿಷ್ಟವಾದ ಸಾಲುಗಳು ಯಾವುವು? ಯಾಕೆ ಇಷ್ಟವಾಯಿತೆಂಬುದನ್ನು ಬರೆಯಿರಿ.
- ❐ ಮೇಲಿನ ಪದ್ಯದಲ್ಲಿ ಬಂದಿರುವ ಪ್ರಾಸದ ಸೊಬಗನ್ನು ಗಮನಿಸಿರಿ. ಪ್ರಾಸಪದಗಳನ್ನು ಗುರುತಿಸಿ ಪಟ್ಟಿಮಾಡಿರಿ.
- ❐ ‘ಗ್ರಾಮೀಣಗೀತೆ’ಯಲ್ಲಿ ಚಿತ್ರಿಸಿರುವ ಹಳ್ಳಿಯ ಸಹಜ ಸೌಂದರ್ಯವನ್ನು ವರ್ಣಿಸಿ ಬರೆಯಿರಿ.
- ❐ ಕವಿತೆಯನ್ನು ಮುಂದುವರಿಸಿ ಬರೆಯಿರಿ.

ತೆಂಗು ಕಂಗು ಬೆಳೆದು ನಿಂತು

ಸುತ್ತ ಮುತ್ತ ದಿಟ್ಟಿ ಹರಿಸಿ

ಕೈಯ ಬೀಸಿ ಬಳುಕಿನಿಂದಾವೋ ॥

ಹಸಿರು ಹುಲ್ಲ ಹಾಸಿನಲ್ಲಿ

ಜಲದ ತಂಪು ಹರಡಿಕೊಂಡು

ಚೆಲುವ ರಾಶಿ ಹಂಚಿಕೊಂಡಾವೋ ॥

.............................................

.............................................

.............................................

.............................................

.............................................

.............................................

# ಹುಗ್ಗಿ ತುಪ್ಪ

ಒಂದೂರಲ್ಲಿ ಗಂಡ ಹೆಂಡ್ತಿ ಇರ್ತಾರೆ. ಅವ್ರುದು ಬೇಸಾಯದ ಬದುಕು. ಎರಡು ಎತ್ತು ಇರ್ತವೆ. ಗಂಡ ಹೆಂಡ್ತಿ ಇಬ್ರು ಬಕ್ತರು. ಹಸಿದು ಬಂದೋರ್ಗೆ ಊಟ ಹಾಕ್ದೆ, ಮನೆಯಿಂದ ಕಳುಸ್ತಿರಲಿಲ್ಲ. ವಿಚಿತ್ರ ಏನಪ್ಪ ಅಂದ್ರೆ ಅವ್ರು ಪ್ರೀತಿಗೆ ಅಡ್ಡೆಸ್ರು ಇಟ್ಗಂಡಿರ್ತರೆ. ಏನೆಂದ್ರೆ, ಹೆಂಡ್ತಿ ಹೆಸ್ರು 'ಉಗ್ಗಿ' ಗಂಡ್ನ ಹೆಸ್ರು 'ತುಪ್ಪ' ಅಂತ. ಎರಡು ಎತ್ತುಗಳು ಇದ್ವೆ? ಅವುಕ್ಕು ಒಂದೆತ್ತಿಗೆ 'ಅಯ್ಯ' ಇನ್ನೊಂದು ಎತ್ತಿಗೆ 'ದೊಣ್ಣೆ' ಅಂತ ಹೆಸ್ರು ಇಟ್ಟಿರ್ತರೆ.

ಇಂಗೇ ಇರ್ಬೇಕಾದ್ರೆ, ಒಂದು ದಿನ ಏನಾಗುತ್ತಂದ್ರೆ, ಗಂಡ ಬೇಸಾಯ ಮಾಡಾಕೆ ಹೊಲಕ್ಕೆ ಹೋಗಿರ್ತನೆ. ಒಬ್ಬ ಅಯ್ಯ ಹೊಟ್ಟೆ ಹಸ್ಗಂಡು ಅದೇ ಮಾರ್ಗವಾಗಿ ಯಾವುದೋ ಊರ್ಗೆ ಹೋಗಾಕೆ ಬರ್ತಿರ್ತನೆ. ಬೇಸಾಯ ಹೊಡೆಯೊನು ಅಯ್ಯನ್ನ ನೋಡಿ, ಭಕ್ತಿಯಿಂದ "ಸ್ವಾಮಿ ಇಲ್ಲಿ ಬರ್ರೀ", ಅಂತ ಕರುದ. ಸದ್ಯ ಇವುನ್ಗೆ ಅಸ್ಟೇ ಬೇಕಾಗಿತ್ತು. ಏನಾದ್ರು ಊಟ ಕೊಟ್ರೆ ಹೊಟ್ಟೆ ತುಂಬ್ಸಿಗೊಳ್ಳಬಹುದು ಅಲ್ವೆ ಅಂತ ಇವುನ ಆಸೆ.

ಆವಾಗ ಇವುನು 'ಸ್ವಾಮಿ ಎಲ್ಲಿಂದ ಬರ್ತ ಇದಿರಿ? ಊಟ ಆಯ್ತ' ಅಂತ ಕೇಳ್ದ. ಆವಾಗ ಅಯ್ಯ ಇಲ್ಲ ಅಂತ ಹೇಳ್ತನೆ. ಹಸಿದು ಬಂದೋರ್ಗೆ ಊಟ ಕೊಡೋದು ನಮ್ಮ ಧರ್ಮ ಅಂದು "ಸ್ವಾಮಿ, ಅಂಗಾದರೆ ನೀವು ನಮ್ಮನೆಗೆ ಹೋಗ್ರಿ. ಮನೇಲಿ ಉಗ್ಗಿ ಐತೆ. ಊಟಕ್ಕೆ ಬಡುಸ್ತಾರೆ. ನಾನು ಇನ್ನೂ ಸ್ವಲ್ಪವೊತ್ತು ಬೇಸಾಯ ಒಡೆದು ಬರ್ತೀನಿ" ಅಂತ ಹೇಳಿ ಕಳುಸ್ತಾನೆ.

ಅಯ್ಯ ಹೊಟ್ಟೆ ಬ್ಯಾರೆ ಹಸಿದಿತ್ತು. ಹುಗ್ಗಿ ಊಟ ಅಂದ್ರೆ ಯಾರು ಬ್ಯಾಡಂತಾರೆ. 'ಸರಿ, ಅಂಗೇ ಆಗ್ಲಪ್ಪ' ಅಂದು, ಇವುರ ಮನ್ಗೆ ಬರ್ತನೆ.



ಅಯ್ಯ ಮನ್ಗ ಬಂದುದ್ದು ನೋಡಿ, ಇಯಮ್ಮಗೆ ತುಂಬ ಸಂತೋಷ ಆಯ್ತು. ನೀರುಕೊಟ್ಟು; ಕೈ ಕಾಲ್ಮುಖ ತೊಳ್ಕಂಡ ಒಳಿಕ ಬಂದ. ಪಟ್‌ಸಾಲೆ ಮೇಲೆ ಕುಂತ್ಗಂಡ. ಆವಾಗ ಆಯಮ್ಮಯಿದ್ದು 'ಸ್ವಾಮಿ ಈಗ ಊಟ ಮಾಡ್ತೀರೋ, ಅಥ್ವಾ ತುಪ್ಪ ಬಂದ್ಮೇಲೆ ಊಟ ಮಾಡ್ತೀರೋ', ಅಂದ್ಲು. ಅಯ್ಯ ತುಪ್ಪ ಅನ್ನುತ್ಲೂ ಬಾಯಗೆ ನೀರು ಬಂದ್ವು. ಹುಗ್ಗಿ ಜೊತೆಗೆ ತುಪ್ಪ ಬಿದ್ರೆ ಚೆನ್ನಾಗಿರುತ್ತೆ. ಅಲ್ವೆ ಎಂದು "ಅಮ್ಮ ತುಪ್ಪ ಬಂದ್ಮೇಲೆ ಊಟ ಮಾಡ್ತೀನಿ" ಅಂತಾನೆ. ಗಂಡ–ಹೆಂಡ್ತಿ ಹೆಸ್ರು, ಹುಗ್ಗಿ–ತುಪ್ಪ ಅಂತ ಅಯ್ಯನಿಗೆ ಏನು ಗೊತ್ತು? ಸರಿ, ಎಷ್ಟತ್ತಾದ್ರು ತುಪ್ಪ ಬರ್ಲಿಲ್ಲ. ಎಲ್ಲೋ ಪೇಟೆಗೆ ಹೋಗಿರಬೇಕು ತರಕೆ ಅಂತ ಯೋಚ್ನೆ ಮಾಡ್ತ ಕುಂತುಬಿಟ್ಟ.

ಸಾಯಂಕಾಲ ಆಯ್ತು. ಬೇಸಾಯ ಬಿಟ್ಗಂಡು ಎರಡೆತ್ತು ಕೈಯಲ್ಲಿ ಹಿಡ್ಕಂಡು ನೊಗ ನೇಗಿಲ ಹೆಗಲ ಮ್ಯಾಲೆ ಇಟ್ಕಂಡು ತುಪ್ಪ ಮನೆಗೆ ಬರ್ತನೆ. ನೊಗ ನೇಗಿಲು ಕೆಳಗೆ ಇಡುವಾಗ ದೊಣ್ಣೆ ಅನ್ನೋ ಎತ್ತು ಕೈಯಿಂದ ಹಗ್ಗ ಕಳ್ಚಗಂಡು ಮನೆ ಹಿಂದ್ಕೆ ಹೋಗಿ ಬಿಡ್ತು.

ಇವ್ನು ಅಯ್ಯ ಎಂಬೆತ್ನ ಕೈಯಲ್ಲಿ ಹಿಡ್ಕಂಡು ಬಾರುಕೋಲು ಹೆಗಲಮ್ಯಾಲೆ ಹಾಕ್ಕಂಡು ಮನೆ ಒಳಗೆ ಬಂದ. ಅಯ್ಯ ಎಂಬ ಎತ್ನ ದನದಕ್ಕೆಗೆ ಹೊಡೆದ. ಹೊಡೆದು ಹೇಳ್ತನೆ ಅಲಲೇ ಅಯ್ಯ ಒಳಗೆ ಬಂದಾನೆ. ಗೂಟ್ಕೆ ಕಟ್ಟಾಕು. ನಾನು ದೊಣ್ಣೆ ಹುಡ್ಕಂಡು ಬರ್ತೀನಿ ಅಂತ ಕೂಗಿ ಹೇಳಿ ಒಗ್ತಾನೆ.

ಪಟ್‌ಸಾಲೆ ಮ್ಯಾಲೆ ಕುಂತಿದ್ನೇ? ಅಯ್ಯ ಇವುನು ಹೇಳೋ ಮಾತುಗ್ಳು ಕೇಳ್ಸಗಂಡ. "ಶಿವ ಶಿವಾ ನಾನೇನು ತಪ್ಪು ಮಾಡ್ಡೀನಿ ಅಂತ ಗೂಟಕ್ಕೆ ಕಟ್ಹಾಕ್ತರಪ್ಪಾ!! ಅಯ್ಯಮ ಕಟ್ಟು, ದೊಣ್ಣೆ ಹುಡ್ಕಂಡು ಬರ್ತೀನಿ. ಅಂತ ಹೇಳಿ ಹೋಗ್ತನಲ್ಲ. ಇವುನ ಕೈಗೆ ಸಿಕ್ರೆ ನನ್ನ ಬಾರುಕೋಲಿಂದ ಚೆನ್ನಾಗಿ ಹೊಡಿತಾನೆ" ಅಂತ ಪಂಚೆ ಮೇಲಕ್ಕೆ ಕಟ್ಗೆಂಡು ಓಟ ಕೀಳ್ತನೆ.

ಅಷ್ಟ್ರಲ್ಲಿ ದೊಣ್ಣೆನ ಹುಡ್ಕಂಡು ಇವುನು ಮನ್ಗೆ ಬರ್ತನೆ. ಅಯ್ಯ, ಇರಲ್ಲ!! ಅವಾಗ ಹೆಣ್ತೀನ ಕೇಳ್ತನೆ. ಅಯ್ಯ ಬಂದಿದ್ದು ಎಲ್ಲೆ ಅಂತ. ಆವಾಗ ಆಕೆ "ಇಲ್ಲೇ ಕುಂತಿದ್ರು. ಊಟ ಮಾಡಿ ಅಂದ್ರೆ, ತುಪ್ಪ ಬರ್ಲಿ ಅಂದ್ರು, ಎಲ್ಲಿ ಓದ್ರು" ಅಂತ ಹೊರಗೆ ಬಂದು ನೋಡ್ತಳೆ. ಅಯ್ಯ ಓಡ್ತಾ ಇರ್ತಾರೆ. ಆವಾಗ ಗಂಡಂಗೆ ಹೇಳ್ತಳೆ, "ನೋಡ್ರಿ, ಅಯ್ಯ ಅಲ್ಲಿ ಓಡ್ತ ಐದಾರೆ" ಅಂತ. "ಅಲೇ ನಮ್ಮನಿಗೆ ಬಂದರು ಯಾರೂ ಅಂಗೆ ಹೋಗಿಲ್ಲ. ಬಂದಾರ್ಗೆ ಊಟಕ್ಕೆ ಕೊಡದು ನಮ್ಮ ಧರ್ಮ, ಏನೇ ಆಗ್ಲೀ ಅವುರನ ಹಿಡಿದು ಇಲ್ಲಿಗೆ ಕರ್ಕಂಡು ಬರ್ತಿನಿ" ಅಂತ್ಹೇಳಿ ಅಯ್ಯನ್ನ ಹಿಡಿಯಕೆ ದಾರೀಲಿ ಇವುನು ಓಡ್ತಿರ್ತನೆ.

ಬಾರುಕೋಲು ಕೈನಾಗೆ ಅಂಗೆ ಐತೆ. ಅಯ್ಯಾ, ಅಯ್ಯಾ ಅಂತ ಕೂಗ್ತಾ ಓಡ್ತಾನೆ. ಅಯ್ಯ ಒಂದು ಸಾರಿ ಹಿಂತಿರುಗಿ ನೋಡಿದ. ಇವನ ಕೈನಾಗೆ ಬಾರುಕೋಲು ಇದ್ದುದು ನೋಡಿ "ಇವುನು ನನ್ನ ಬಡಿಯಕೆ ಬರಾದು" ಅಂತ ಹೆದ್ರಿ, ಇನ್ನು ಜೋರಾಗಿ ಓಡಾಕೆ ಶುರುಮಾಡಿದ.

ದಾರೀಲಿ, ಅಕ್ಕಪಕ್ಕದಲ್ಲಿ ನಿಂತಿರೋ ಜನ ಇವರಿಬ್ರುನು ನೋಡ್ತಿರ್ತರೆ. "ಅಯ್ಯ ಮನೇಲಿ ಏನೋ ಕಳ್ತನ ಮಾಡಿರಬೇಕು ಅದಕೆ ಇಯಪ್ಪ ಹೊಡಿಯಕೆ ಬಾರುಕೋಲು ತಗಂಡು ಓಡ್ಸಿಗಂಡು ಹೋಗ್ತಿರದು" ಅಂತ ಮಾತಾಡ್ತಾರೆ. ಇವುನ್ಗೆ ಅಯ್ಯನ್ನ ಹಿಡಿಯಕೆ ಆಗ್ಲಿಲ್ಲ. ಓಡಿಓಡಿ ಸುಸ್ತಾಯ್ತು. ಸಿಕ್ಕಿಲ್ಲ. "ಸರಿ, ಓದ್ರೆ ಒಗ್ಲೀ ಬಿಡು" ಅಂದು ಮನ್ಗೆ ಬರ್ತನೆ.

ಸಂಗ್ರಹ : **ಮೈಲಹಳ್ಳಿ ರೇವಣ್ಣ**

❒ ಕಥೆಯನ್ನು ಓದಿದಿರಲ್ಲವೇ? ಕಥೆಯಲ್ಲಿ ನೀವು ಮೆಚ್ಚಿಕೊಂಡ ಅಂಶಗಳು ಯಾವುವು ಎಂಬುದನ್ನು ಬರೆದು ತಿಳಿಸಿ.

❒ ಹುಗ್ಗಿ–ತುಪ್ಪದ ಆಸೆಯಿಂದ ಮನೆಗೆ ಬಂದ ಅಯ್ಯ ಪೇಚಿಗೆ ಒಳಗಾದ ಘಟನೆಯನ್ನು ನಿಮ್ಮ ಮಾತುಗಳಲ್ಲಿ ಹೇಳಿರಿ.

❒ ಕಥೆಯಲ್ಲಿ ಬರುವ ಪಾತ್ರಗಳನ್ನು ಪರಸ್ಪರ ಹಂಚಿಕೊಂಡು ತರಗತಿಯಲ್ಲಿ ಅಭಿನಯಿಸಿರಿ.

- "ಸ್ವಾಮಿ ಅಂಗಾದರೆ, ನೀವು ನಮ್ಮನೆಗೆ ಹೋಗ್ರಿ ಮನೇಲಿ ಉಗ್ಗಿ ಐತೆ ಊಟಕ್ಕೆ ಬಡಿಸುತ್ತಾರೆ. ನಾನು ಇನ್ನೂ ಸ್ವಲ್ಪ ಹೊತ್ತು ಬೇಸಾಯ ಒಡೆದು ಬರ್ತೀನಿ."

– ಗ್ರಾಮ್ಯ ಭಾಷೆಯಲ್ಲಿರುವ ಮೇಲಿನ ಗದ್ಯಭಾಗವನ್ನು ಶಿಷ್ಟಭಾಷೆಯಲ್ಲಿ ಈ ರೀತಿ ಪರಿವರ್ತಿಸಿ ಬರೆಯಬಹುದು :

"ಸ್ವಾಮಿ ಹಾಗಾದರೆ, ನೀವು ನಮ್ಮ ಮನೆಗೆ ಹೋಗಿರಿ. ಮನೆಯಲ್ಲಿ ಹುಗ್ಗಿ ಇದೆ, ಊಟಕ್ಕೆ ಬಡಿಸುತ್ತಾರೆ. ನಾನಿನ್ನೂ ಸ್ವಲ್ಪ ಹೊತ್ತಿನವರೆಗೆ ಬೇಸಾಯ ಹೊಡೆದು ಬರುತ್ತೇನೆ"

– ಮೇಲೆ ಕೊಟ್ಟಿರುವ ಮಾದರಿಯಂತೆ ಪಾಠದ ಯಾವುದಾದರೂ ಸಣ್ಣಭಾಗವೊಂದನ್ನು ಶಿಷ್ಟರೂಪಕ್ಕೆ ಪರಿವರ್ತಿಸಿ ಬರೆಯಿರಿ.

❒ ಬರಹಗಳಲ್ಲಿ ಲೇಖನ ಚಿಹ್ನೆಗಳ ಅಗತ್ಯ ಏನೆಂಬುದರ ಬಗ್ಗೆ ನೀವು ತಿಳಿದುಕೊಂಡಿದ್ದೀರಿ. ಲೇಖನ ಚಿಹ್ನೆಗಳು ಇಲ್ಲದ ಬರಹಗಳು ಸ್ಪಷ್ಟವಾದ ಅರ್ಥ ಅಥವಾ ಭಾವನೆಗಳನ್ನು ನೀಡಲಾರವು. ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಸೂಕ್ತಲೇಖನ ಚಿಹ್ನೆಗಳೊಂದಿಗೆ ಪುನಃ ಬರೆಯಿರಿ.

ಮಾತಿನ ಮಹತ್ವದ ಬಗ್ಗೆ ಹಲವಾರು ಲೇಖನಗಳಿವೆ ಹಲವಾರು ಭಾಷೆಗಳಲ್ಲಿ ಸಾಕಷ್ಟು ಗಾದೆಮಾತುಗಳಿವೆ ಗಾದೆಮಾತುಗಳು ಯಾರಿಗೆ ತಾನೆ ಅರ್ಥವಾಗುವುದಿಲ್ಲ ಮಾತು ಕೇಳುವವರಿಗೆ ಹಿತವಾಗಿರಬೇಕು ದಯೆ ವಿನಯ ವಿವೇಕದ ಮಾತುಗಳು ಯಾರಿಗೆ ತಾನೆ ಪ್ರಿಯವಾಗದು ಆದ್ದರಿಂದಲೇ ಮಾತೇ ಮುತ್ತು ಮಾತೇ ಮೃತ್ಯು ಎಂಬ ಸುಭಾಷಿತವಿದೆ

❒ ಜನಪದ ಸಾಹಿತ್ಯದಲ್ಲಿ ಕಥೆಗಳು ಅತ್ಯಂತ ಜನಪ್ರಿಯ. ನೀವು ಇಂತಹ ಹಲವು ಕಥೆಗಳನ್ನು ಕೇಳಿರಬಹುದು, ಓದಿರಬಹುದು. ಅವುಗಳಲ್ಲಿ ಒಂದನ್ನು ತರಗತಿಯಲ್ಲಿ ಹೇಳಿರಿ.

❒ ಈ ಘಟಕದಲ್ಲಿ ನೀವು ಸಂಗ್ರಹಿಸಿದ ಗಾದೆ, ಜನಪದ ಕಥೆ, ಹಾಡುಗಳನ್ನು ಒಟ್ಟು ಸೇರಿಸಿ ಜಾನಪದ ಸಂಚಿಕೆಯನ್ನು ತಯಾರಿಸಿರಿ.

❖❖❖

